ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಈ ದಿನ ದಿ:11.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ಆರೋಪಿ ಪರ ಶ್ರೀ ಕೆ.ಪಿ.ಪಿ ವಕೀಲರಿಂದ:-**

ಈಗ ನನ್ನ ತಂದೆ ತೀರಿಕೊಂಡಿರುತ್ತಾರೆಂದರೆ ಸರಿ. ಬಿಡದಿ ರಸ್ತೆಯಲ್ಲಿರುವ ಕಟ್ಟಡವನ್ನು ಆಸ್ಪತ್ರೆ ನಡೆಸಲು ನನ್ನ ತಾಯಿ ಬಾಡಿಗೆಗೆ ನೀಡಿರುತ್ತಾರೆಂದರೆ ಸಾಕ್ಷಿಯು ನಾನು ಬಾಡಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ಬಾಡಿಗೆ ನೀಡಿರುವ ಜಾಗ ನನ್ನ ಹೆಸರಿಗೆ ಇದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಹಾರೋಹಳ್ಳಿಯ ರಂಗನಾಥ ಬಡಾವಣೆಯಲ್ಲಿರುವ ಮೂರು ನಿವೇಶನಗಳನ್ನು ನಮ್ಮ ನನ್ನ ಚಿಕ್ಕಪ್ಪಂದಿರು ನನ್ನ ತಂದೆಗೆ ನೀಡಿದ ಸ್ವತ್ತುಗಳಾಗಿದ್ದು, ಅವುಗಳನ್ನು ನಾವು ಎಲ್ಲರು ಮಾರಾಟ ಮಾಡಿರುತ್ತೇವೆಂದರೆ ಸಾಕ್ಷಿಯು ನನ್ನ ತಂದೆ ದಾನಪತ್ರದ ಮೂಲಕ ನನ್ನ ಅಣ್ಣನಿಗೆ ಸದರಿ ಆಸ್ತಿಗಳನ್ನು ನೀಡಿದ್ದು, ನನ್ನ ಅಣ್ಣ ಅವುಗಳನ್ನು ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಸಾಲದ ತಿರುವಳಿಗಾಗಿ ಸದರಿ ಆಸ್ತಿಗಳನ್ನು ನಾವು ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ನನ್ನ ವೈಯಕ್ತಿಕ ಆದಾಯ ಕುರಿತು ಯಾವುದೇ ದಾಖಲೆಗಳನ್ನು ಈವರೆಗೂ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಈವರೆಗೂ ನಾನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆಂದು ಹೇಳಿರುವ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಹಾರೋಹಳ್ಳಿಯಿಂದ ರಾಮನಗರಕ್ಕೆ ಹೋಗಲು ಅಂದಾಜು ಒಂದು ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ನನ್ನ ಚಿಕ್ಕಪ್ಪ

ಮೂರ್ತಿ ಇವರ ಮನೆ ಇದೆ ಎಂದರೆ ಸರಿ. ಚಿಕ್ಕಪ್ಪನ ಮನೆಯಲ್ಲಿ ಆರೋಪಿಯ ಅಕ್ಕ ಮತ್ತು ಅಕ್ಕನ ಗಂಡ ವಾಸವಿರುತ್ತಾರೆಂದರೆ ಸರಿ. ಸದರಿ ದಿನ ಆರೋಪಿತಳು ಅವರ ಅಕ್ಕನ ಮನೆಗೆ ಹೋದ ಬಗ್ಗೆ ಗೊತ್ತಿಲ್ಲ.

ನವೆಂಬರ್ 2016 ರಿಂದ ಮಾರ್ಚ್ 2017 ರ ವರೆಗೆ ನನ್ನ ಬಳಿ 12 ಲಕ್ಷ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಈವರೆಗೂ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಆದಾಯ ತೆರಿಗೆ ಬಗ್ಗೆ ನನಗೆ ಸ್ವಲ್ಪ ಗೊತ್ತಿರುತ್ತದೆ. ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಒಬ್ಬ ವ್ಯಕ್ತಿಗೆ 20 ಸಾವಿರ ಕ್ಕಿಂತ ಹೆಚ್ಚಿಗೆ ವ್ಯವಹಾರ ಮಾಡುವ ಸಂದರ್ಭದಲ್ಲಿ ದಾಖಲೆ ಮೂಲಕ ವ್ಯವಹಾರ ಮಾಡುವುದು ನನಗೆ ಗೊತ್ತಿಲ್ಲ. ದಿ.25.03.2017 ರಂದು ಆರೋಪಿ ಹಣ ಕೇಳಲು ನನ್ನ ಮನೆಗೆ ಬೆಳಿಗ್ಗೆ 10:00 ಗಂಟೆಗೆ ಬಂದಿರಲಿಲ್ಲ, ಆ ದಿನ ಆರೋಪಿ ಬೆಳಿಗ್ಗೆ 10:00 ಗಂಟೆ ಅವರ ಕಚೇರಿಯಲ್ಲಿದ್ದರು ಎಂದರೆ ಸರಿಯಲ್ಲ.

ಆರೋಪಿಗೆ ಹಣ ನೀಡುವಾಗ ಆರೋಪಿತಳಿಂದ ಭದ್ರತೆಗಾಗಿ ನಾನು ಏನನ್ನು ಪಡೆದಿರುವುದಿಲ್ಲ. ಪಿರ್ಯಾದಿ ಮತ್ತು ನೋಟಿಸ್ಸಿನಲ್ಲಿರುವ ಸಂಗತಿಗಳು ನನಗೆ ಗೊತ್ತಿರುತ್ತವೆ. ದಿ.4.10.2017 ರಂದು ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ನೀಡಿರುತ್ತೇನೆ. ನನ್ನ ಪಿರ್ಯಾದಿಯ 3 ನೇ ಪುಟದ 4 ನೇ ಪ್ಯಾರಾದಲ್ಲಿ ಆರೋಪಿ ರೂ.60 ಸಾವಿರ ಹಣವನ್ನು ಹಿಂದಿರುಗಿಸುವಂತೆ ನೋಟಿಸ್ ನೀಡಿರುತ್ತೇನೆಂಬ ವಿಚಾರ ನಮೂದಿಸಿರುವುದು ನನಗೆ ಗೊತ್ತಿಲ್ಲ. ದಿ.23.10.2017 ರಂದು ಆರೋಪಿಯ ಎರಡು ವಿಳಾಸಗಳಿಗೆ ನೋಂದಾಯಿತ ಅಂಚೆ ಮೂಲಕ ನೋಟಿಸ್ ಕಳುಹಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ದಿ.25.10.2017 ರಂದು ಆರೋಪಿಯ ಕಚೇರಿಯ ವಿಳಾಸಕ್ಕೆ ನೋಟಿಸ್ ಮುಟ್ಟಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೇನೆ.

ದಿ.23.10.2017 ರಂದು ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆರೋಪಿಗೆ ನೋಟಿಸ್ ಕಳುಹಿಸಿದ ಸಂದರ್ಭದಲ್ಲಿ ಆರೋಪಿಯು ನಾನು ನಮೂದಿಸಿರುವ ವಿಳಾಸಗಳಲ್ಲಿ ಇರಲಿಲ್ಲ, ರಾಮನಗರ ತಾಲ್ಲೂಕಿನ ಯರೇಹಳ್ಳಿ ಗ್ರಾಮದಲ್ಲಿದ್ದರು ಎಂದರೆ ಸರಿಯಲ್ಲ.

ಆರೋಪಿ ನನಗೆ 5 ವರ್ಷದಿಂದ ಪರಿಚಿತರಿರುತ್ತಾರೆಂದು ನನ್ನ ಪ್ರಮಾಣೀಕೃತ ಹೇಳಿಕೆಯಲ್ಲಿ ನಮೂದಿಸಿರುತ್ತೇನೆಂದರೆ ಸರಿ. ಸದರಿ ಆರೋಪಿತಳು ಅವರ ಮದುವೆಯಾದ ನಂತರದಿಂದ ನನಗೆ ಪರಿಚಯ ಎಂದರೆ ಸರಿ.

ಆರೋಪಿತಳು 2010 ರಲ್ಲಿ ಕೆಲಸಕ್ಕೆ ಸೇರಿದ್ದು, 2014 ರಲ್ಲಿ ಆರೋಪಿತಳ ಮದುವೆಯಾಗಿದ್ದರೂ 2017 ರಲ್ಲಿ ಮದುವೆಗಾಗಿ ಮತ್ತು ಕೆಲಸಕ್ಕೆಂದು ಆರೋಪಿತಳು ಹಣ ಪಡೆದ ಬಗ್ಗೆ ಸುಳ್ಳಾಗಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಆರೋಪಿತರು ನನಗೆ ಆ ಕಾರಣಗಳನ್ನು ಹೇಳಿ ಹಣ ಪಡೆದಿರುತ್ತಾರೆಳೆಂದು ನುಡಿಯುತ್ತಾರೆ. ಆರೋಪಿತಳ ಗಂಡ ಆರೋಪಿತಳನ್ನು ಮದುವೆಯಾಗುವ ಪೂರ್ವದಲ್ಲೇ ನನಗೆ ಪರಿಚಿತನಿದ್ದ ಎಂದರೆ ಸರಿ. ಸದರಿ ಆರೋಪಿತಳ ಮದುವೆ ನಾನು ಹೋಗಿದ್ದೆ ಎಂದರೆ ಸರಿ. 2017 ರಲ್ಲಿ ಆರೋಪಿತಳಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿತಳ ಗಂಡನೊಂದಿಗೆ ಆರೋಪಿ ತವರುಮನೆಗೆ ನಾನು ಮತ್ತು ಅವಳ ಗಂಡ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಆರೋಪಿತಳ ಗಂಡನ ಅಕ್ಕನಿಗೂ ಮತ್ತು ನನಗೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನನಗೆ ನಮ್ಮ ಮನೆಯಲ್ಲಿ ಊಟ ನೀಡದೆ ಇದ್ದುದ್ದರಿಂದ ನಾನು ನಮ್ಮ ಮನೆಗೆ ಹೊಂದಿಕೊಂಡು ಇರುವ ಆರೋಪಿತಳ ಗಂಡನ ಅಕ್ಕನ ಮನೆಯಲ್ಲಿ ಊಟ ಮಾಡುತ್ತಿದ್ದುದ್ದರಿಂದ

ನಮ್ಮ ಮನೆಯವರಿಗೂ ಮತ್ತು ಆರೋಪಿತಳ ಗಂಡನ ಅಕ್ಕನ ಮನೆಯವರಿಗೂ ಭಿನ್ನಾಭಿಪ್ರಾಯ ಬಂದಿದ್ದು, ಆ ಕಾರಣದಿಂದ ನನಗೂ ಮತ್ತು ಆರೋಪಿಯ ಗಂಡನ ಅಕ್ಕಳಿಗೂ ವೈಮನಸ್ಸು ಉಂಟಾಗಿತ್ತು ಎಂದರೆ ಸರಿಯಲ್ಲ.

ಆರೋಪಿ ಗಂಡನೊಂದಿಗೆ ಆರೋಪಿತಳ ತವರುಮನೆಗೆ ಹೋಗುತ್ತಿದ್ದಾಗ ಆರೋಪಿತಳ ತವರುಮನೆಯಿಂದ ಚೆಕ್ಕುಗಳನ್ನು ನಾನು ತೆಗೆದುಕೊಂಡು ಹೋಗಿರುತ್ತೇನೆಂದರೆ ಸರಿಯಲ್ಲ. ಆರೋಪಿತಳು ತನ್ನ ತವರುಮನೆಯಲ್ಲಿ ಚೆಕ್ಕು ಕಳೆದು ಹೋದ ಬಗ್ಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಿ.28.03.2017 ರಂದು ದೂರು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಕಳೆದುಹೋದ ಚೆಕ್ಕುಗಳ ಕುರಿತು ಬ್ಯಾಂಕಿಗೆ ಸದರಿ ಕಳೆದಹೋದ ಚೆಕ್ಕುಗಳು ಬ್ಯಾಂಕಿಗೆ ಬಂದರೆ ಸದರಿ ಚೆಕ್ಕುಗಳನ್ನು ಮಾನ್ಯ ಮಾಡಬಾರದು ಎಂದು ಲಿಖಿತವಾಗಿ ತಿಳಿಸಿರುತ್ತಾಳೆಂದರೆ ನನಗೆ ಗೊತ್ತಿಲ್ಲ.

ಆರೋಪಿಯ ಗಂಡ ಈಗ ಮೃತರಾಗಿರುತ್ತಾರೆ. ಆರೋಪಿಯ ಗಂಡ ಅನೇಕ ಬಾರಿ ನನಗೆ ಚೆಕ್ಕುಗಳನ್ನು ಹಿಂದಿರುಗಿಸುವಂತೆ ಹೇಳಿದ್ದು, ಆರೋಪಿಯ ಗಂಡ ಮೃತರಾದ ನಂತರ ಸಹ ಚೆಕ್ಕುಗಳನ್ನು ಹಿಂದಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

ಹಾರೋಹಳ್ಳಿಯ ವೆಂಕಟೇಶ್ವರ ಬೇಕರಿಯ ಮಾಲೀಕ ರಮೇಶ್ ನನಗೆ ಪರಿಚಯವಿರುತ್ತದೆ. ಆತ ನನ್ನ ಆಪ್ತಸ್ನೇಹಿತ ಎಂದರೆ ಸರಿಯಲ್ಲ. ಆರೋಪಿತಳ ತವರುಮನೆಯಿಂದ ಪಡೆದ ಚೆಕ್ಕುಗಳನ್ನು ರಮೇಶ್ ರವರ ಹೆಂಡತಿಯ ಮೂಲಕ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣಗಳನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿಗೂ ನನಗೂ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ ಎಂದರೆ ಸರಿಯಲ್ಲ. ವೈಯಕ್ತಿಕ ಕಾರಣಗಳಿಗಾಗಿ ಅವರ ತವರುಮನೆಯಿಂದ ಪಡೆದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಆರೋಪಿತಳ ವಿರುದ್ದ ಸುಳ್ಳು ಪ್ರಕರಣ

ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ನಿಪಿ-1 ಚೆಕ್ಕಿನಲ್ಲಿ ಎಲ್ಲ ಒಕ್ಕಣಿಕೆಗಳನ್ನು ನಾನೇ ಬರೆದಿರುತ್ತೇನೆಂದರೆ ಸರಿಯಲ್ಲ. ಸದರಿ ಚೆಕ್ಕಿನ ಮೇಲೆ ಆರೋಪಿತಳ ಸಹಿಯನ್ನು ನಾನೇ ಮಾಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.